ಮೂಲ ದಾವಾ ನಂ. 107/2014

ಡಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 12-01-2024 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ. ಎಸ್. ಬಿ. ವಕೀಲರಿಂದಃ**

ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಮ್ಮ ಮೂಲ ಊರು ಮಾಳ್ಕೋಡ. ಮೂಲತಃ ನನ್ನ ತಂದೆಗೆ ಬಂದಂತಹ ಆಸ್ತಿಯ ಸರ್ವೆ ನಂಬರ್ 51 ಅಥವಾ 52 ಇರಬಹುದು. ನನ್ನ ತಂದೆ 2003 ರಲ್ಲಿ ಮೃತಪಟ್ಟಿರುತ್ತಾರೆ. ಸದ್ರಿ ಆಸ್ತಿ ಇದುವರೆಗೂ ಸಾಮಾಯಿಕವಾಗಿಯೇ ಇದೆ. ನಮ್ಮ ಸಹೋದರರ ಮಧ್ಯೆ ಆ ಕುರಿತು ಇನ್ನೂ ವಾಂಟಣಿ ಆಗಿರುವುದಿಲ್ಲ. ನನ್ನ ತಂದೆಗೆ ಸೇರಿದ ಮಾಳ್ಕೋಡು ಗ್ರಾಮದಲ್ಲಿ 9 ಗುಂಟೆ ಜಾಗ ಇದೆ. ಸದ್ರಿ 9 ಗುಂಟೆ ಜಾಗವನ್ನು ಬಿಟ್ಟರೆ ನಿಮ್ಮ ತಂದೆಗೆ ಮಾಳ್ಕೋಡು ಗ್ರಾಮದಲ್ಲಿ ಬೇರೆ ಆಸ್ತಿ ಇಲ್ಲವಾ ಎಂದರೆ ಸಾಕ್ಷಿ ಅಲ್ಲಿ ಬೇರೆ 20 ಗುಂಟೆ ಜಾಗ ಕೂಡಾ ಇದೆ ಎಂದು ನುಡಿಯುತ್ತಾರೆ.

ನಾವು ಮಾಳ್ಕೋಡು ಗ್ರಾಮದಿಂದ ಸರಳಗಿ ಗ್ರಾಮಕ್ಕೆ 1983 ರಲ್ಲಿ ಪ್ರಥಮತಃ ಬಂದಿರುತ್ತೇವೆ. ಆ ರೀತಿ ಬಂದ ತಕ್ಷಣ ಬೇರೆಯವರ ತೋಟದಲ್ಲಿದ್ದ ಒಂದು ಕಬ್ಬಿನ ಗಾಣದ ಮಿಲ್ ನಲ್ಲಿ ವಾಸವಿದ್ದೆವು. ಅದು ಇಮ್ದಾದ್ ಅಲಿ ರವರಿಗೆ ಸೇರಿದ ಕಬ್ಬಿನ ಗಾಣವಾಗಿತ್ತು. ಆ ರೀತಿ ಸದ್ರಿ ಗ್ರಾಮಕ್ಕೆ 1983 ರಲ್ಲಿ ಬಂದಿದ್ದೆವು ಎಂದು ತೋರಿಸಲು ನನ್ನ ಹತ್ತಿರ ದಾಖಲೆ ಇದೆ. ನಾವು ಸರಳಗಿ ಗ್ರಾಮಕ್ಕೆ ಕಬ್ಬಿನ ಗಾಣ ನಡೆಸುವ ಸಲುವಾಗಿಯೇ ಬಂದಿದ್ದೆವು. ನಾವು ಕಬ್ಬಿನ ಗಾಣ ನಡೆಸುತ್ತಿದ್ದೆವು ಎಂದು ತೋರಿಸಲು ಈಗ ಯಾವದೇ ದಾಖಲೆ ಇರುವುದಿಲ್ಲ. ಈ ವಿಚಾರದ ಬಗ್ಗೆ ನನ್ನ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಈ ವಿಚಾರವನ್ನು ಉದಾಹರಣೆಯಲ್ಲಿ ಬರೆಸಿರುವುದಿಲ್ಲ. ಕಬ್ಬಿನ ಗಾಣವನ್ನು ಬಿಟ್ಟು ಇಮ್ದಾದ್ ಅಲಿ ರವರಿಗೆ ಸೇರಿದ ಗದ್ದೆಯನ್ನು ಕೂಡಾ ಮಾಡುತ್ತಿದ್ದೆವು. ನಾವು ಮೊದಲು ಬಂದಾಗ ಸದ್ರಿ ಇಮ್ದಾದ್ ಅಲಿ ರವರ ಜಾಗದಲ್ಲಿಯೇ ಬಿಡಾರ ಕಟ್ಟಿಕೊಂಡು ವಾಸವಿದ್ದೆವು. ಅದೇ ಬಿಡಾರದಲ್ಲಿ ನಾವು ಸುಮಾರು 5 ವರ್ಷ ವಾಸವಿದ್ದೆವು.

ಈ ಹಂತದಲ್ಲಿ 5 ನೇ ಪ್ರತಿವಾದಿ ಪರ ವಕೀಲರು ಪ್ರತಿಯೊಂದು ಪ್ರಶ್ನೆಗೂ ತಕರಾರು ಮಾಡುತ್ತಿದ್ದು ಮತ್ತು ಸಾಕ್ಷಿ ಸರಿಯಾಗಿ ಸಾಕ್ಷ್ಯ ನುಡಿಯದಿರುವ ಕಾರಣ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.